1. ಸ್ಥಳೀಯ ಗ್ರಾಮಸ್ಥರು ಒಂದು ವರ್ಷದೊಳಗೆ ರೂ.1 ಲಕ್ಷ ವಂತಿಗೆ ನೀಡಬೇಕು.
2. ಎರಡು ಎಕರೆ ಜಮೀನು ನೀಡಬೇಕು.
3. ಉಚಿತ ತಾತ್ಕಾಲಿಕ ಕಟ್ಟಡ ನೀಡಬೇಕು.

ಆ) ಅಜ್ಜನಹಳ್ಳಿ ಗ್ರಾಮಸ್ಥರು ಮೇಲಿನ 3 ನಿಬಂಧನೆಗಳನ್ನು ಪೂರೈಸಿರುವುದರಿಂದ ಅಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಅನುಮತಿಯನ್ನು ಈಗಾಗಲೇ ನೀಡಲಾಗಿದೆ.

ಹೊಸಪಾಳ್ಯ ಪ್ರಾಥಮಿಕ ಆರೋಗ್ಯ ಕೇಂದ್ರದ ಗ್ರಾಮಸ್ಥರು ನಿಬಂಧನೆಗಳನ್ನು ಪೂರೈಸಿಲ್ಲದ ಕಾರಣ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಪ್ರಾರಂಭಿಸಲು ಅನುಮತಿ ನೀಡಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಬೀದರ್ ಮೆಡಿಕಲ್ ಕಾಲೇಜಿನ ವೈದ್ಯ & ಸಿಬ್ಬಂದಿ ವೇತನ

379 (609) ಶ್ರೀ ಬಂಡೆಪ್ಪ ಕಾಶೆಂಪೂರ್ (ಬೀದರ್–ದಕ್ಷಿಣ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಮೆಡಿಕಲ್ ಕಾಲೇಜು ಯಾವಾಗ ಪ್ರಾರಂಭವಾಯಿತು;

ಆ) ಕಾಲೇಜು ಪ್ರಾರಂಭವಾದಾಗಿನಿಂದ ಯಾವ ಯಾವ ವರ್ಗದಡಿಯಲ್ಲಿ ವೈದ್ಯರು ಮತ್ತು ಇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ; (ಪೂರ್ಣ ವಿವರಗಳನ್ನು ನೀಡುವುದು);

ಇ) ವೈದ್ಯರು ಮತ್ತು ಇತರೆ ಸಿಬ್ಬಂದಿಗಳನ್ನು ಯಾವ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿದೆ;

ಈ) ಬೀದರ್ ಮೆಡಿಕಲ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಸರ್ಕಾರ ವೇತನ ಭರಿಸುತ್ತಿದೆಯೇ ಅಥವಾ ಗುತ್ತಿಗೆದಾರರ ಮೂಲಕ ಭರಿಸಲಾಗುತ್ತಿದೆಯೇ;

ಉ) ಬೀದರ್ ಮೆಡಿಕಲ್ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಗುತ್ತಿಗೆದಾರರು ಸರಿಯಾಗಿ ವೇತನ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ ಸರ್ಕಾರ ಈ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಂಡಿದೆಯೇ;

ಋ) ಹಾಗಿದ್ದಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ರಾಮಚಂದ್ರ ಗೌಡ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) 2007–08

ಆ) ಅನುಬಂಧದಲ್ಲಿ ತೋರಿಸಿದೆ.

ಇ) ನೇರ ನೇಮಕಾತಿ ಮತ್ತು ಹೊರಗುತ್ತಿಗೆ ಮೂಲಕ.

ಈ) ಸ್ವಾಯತ್ತ ಸಂಸ್ಥೆಯ ಸೇವಾ ನೌಕರರಿಗೆ ಸಂಸ್ಥೆಯಿಂದಲೇ ವಿತರಿಸಲಾಗುತ್ತಿದೆ.

ಹೊರ ಗುತ್ತಿಗೆಯಿಂದ ಪಡೆಯುವ ಸೇವೆಗೆ ಗುತ್ತಿಗೆದಾರರಿಗೆ ನೀಡಲಾಗುತ್ತಿದೆ.

ಉ) ಹೌದು.

ಊ) ಹೌದು.

ಋ) ಗುತ್ತಿಗೆದಾರ ಸಂಸ್ಥೆಗೆ ಕಾರಣ ಕೇಳುವ ನೋಟೀಸನ್ನು ನೀಡಲಾಗಿತ್ತು. ಕಾರ್ಮಿಕ ಕಾಯ್ದೆಯನುಸಾರ ತನ್ನ ನೌಕರರಿಗೆ ಹಣ ಸಂದಾಯ ಮಾಡಿರುವುದಾಗಿ ಲಿಖಿತ ಮೂಲಕ ತಿಳಿಸಿರುತ್ತದೆ.

ಪ್ರಶ್ನೆ ಸಂಖ್ಯೆ: 609ಕ್ಕೆ ಅನುಬಂಧ

ಕ್ರಮ ಸಂಖ್ಯೆ	ಬೋಧಕರ/ಬೋಧಕೇತರ ಸಿಬ್ಬಂದಿ ವಿವರ	ಹುದ್ದೆಗಳ ಸಂಖ್ಯೆ
ಬೋಧಕ ಸಿಬ್ಬಂದಿ		
1	ಪ್ರಾಧ್ಯಾಪಕರು	14
2	ಸಹ ಪ್ರಾಧ್ಯಾಪಕರು	13
3	ಸಹಾಯಕ ಪ್ರಾಧ್ಯಾಪಕರು	33
4	ಟ್ಯೂಟರ್ಸ್	26
5	ಸೀನಿಯರ್ ರೆಸಿಡೆಂಟ್	22
6	ಜೂನಿಯರ್ ರೆಸಿಡೆಂಟ್	37
ಬೋಧಕೇತರ ಸಿಬ್ಬಂದಿ		
1	ಶುಶ್ರೂಷಕರು	93

2	ಪ್ರಯೋಗಶಾಲಾ ತಂತ್ರಜ್ಞರು	48
3	ಕ್ಷ–ಕಿರಣ ತಂತ್ರಜ್ಞರು	05
4	ವೈದ್ಯಕೀಯ ದಾಖಿಲಾತಿ ತಂತ್ರಜ್ಞರು	12
5	ಸಹಾಯಕ ಗ್ರಂಥಪಾಲಕರು	02
6	ಚಿತ್ರಕಾರ	01
7	ಮಾಡೆಲ್ಲರ್	01
8	ಅಂಕೆ ಸಂಖ್ಯೆ ತಂತ್ರಜ್ಞರು	01
9	ಉಪ ಗ್ರಂಥಪಾಲಕರು	01
10	ವೈದ್ಯಕೀಯ ಸಮಾಜ ಸೇವಕರು	02
11	ಇತರೆ	105

ವಕ್ಫ್ ಮಂಡಳಿಯ ಅನುದಾನದಲ್ಲಿ ನಡೆಯುತ್ತಿರುವ ಕಾಮಗಾರಿ

380 (774) ಶ್ರೀ ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಹಜ್ ವಕ್ಫ್ ಮತ್ತು ಅಲ್ಪಸಂಖ್ಯಾತರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಸವ ಕಲ್ಯಾಣದಲ್ಲಿ ವಕ್ಫ್ ಅನುದಾನದಲ್ಲಿ ಎಷ್ಟು ಶಾದಿಮಹಲ್ ಗಳನ್ನು ಮತ್ತು ಇತರೆ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ; (ಗ್ರಾಮವಾರು ವಿವರಗಳನ್ನು ಒದಗಿಸುವುದು);

ಆ) ಕಳೆದ ಮೂರು ವರ್ಷಗಳಲ್ಲಿ ಇದಕ್ಕಾಗಿ ವಕ್ಫ್ ಮಂಡಳಿಯಿಂದ ಎಷ್ಟು ಅನುದಾನ ಬಂದಿದೆ;

ಇ) ಇದೇ ಅವಧಿಯಲ್ಲಿ ಎಷ್ಟು ಪ್ರಸ್ತಾವನೆಗಳನ್ನು ಮಂಡಳಿಗೆ ಸಲ್ಲಿಸಲಾಗಿತ್ತು, ಎಷ್ಟಕ್ಕೆ ಅನುಮೋದನೆ ದೊರೆತಿದೆ ಇನ್ನೂ ಎಷ್ಟು ಪ್ರಸ್ತಾವನೆಗಳು ಬಾಕಿ ಉಳಿದಿವೆ?

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್ (ಹಜ್ ವಕ್ಫ್ ಮತ್ತು ಅಲ್ಪಸಂಖ್ಯಾತರ ಸಚಿವರು) :

ಅ) ವಕ್ಫ್ ಅನುದಾನದಲ್ಲಿ ಶಾದಿಮಹಲ್‌ಗಳಿಗೆ ಹಣ ಬಿಡುಗಡೆ ಮಾಡಲು ಅವಕಾಶವಿರುವುದಿಲ್ಲ. ಆದರೆ, ಅಲ್ಪಸಂಖ್ಯಾತರ ನಿರ್ದೇಶನಾಲಾಯದಿಂದ ದಾರುಲ್ ಸಲಾಂ ವೆಲ್‌ಫೇರ್ ಟ್ರಸ್ಟ್, ಬಸವಕಲ್ಯಾಣ ಸಂಸ್ಥೆಗೆ